"ಯಾಕೆ? ನನ್ನ ಗುರ್ತು ಸಿಕ್ತಿಲ್ವಾ? ನಮ್ಮೂರಿಗೆ ನಾನು ಬರೋಕೆ ನಿಮ್ಮ ಪರ್ಮಿಷನ್ ಬೇಕಾ?" ದನಿ ಬಿಸಿಯಾಗಿತ್ತು.

"ನೀನಲ್ಲ, ಯಾರೇ ಬಂದ್ರೂ ಊರೊಳಗೆ ಪ್ರವೇಶ ಇಲ್ಲ."

"ಹಾಗಂತ ಗೌರ್ಮೆಂಟಿನ ಆರ್ಡರ್ ಇದ್ಯಾ?"

"ನಮ್ಮೂರಿಗೆ ನಾವೇ ಗೌರ್ಮೆಂಟು. ಅದರಲ್ಲೂ ಬೆಂಗಳೂರಿಂದ ಬಂದಿದೀರಾ. ನಿಮ್ಮನ್ನ ಊರೊಳಗೆ ಬಿಟ್ಕೊಂಡ್ರೆ ಕಾಯಿಲೆ ವಕ್ಕರಿಸಿದ ಹಾಗೇ ಲೆಕ್ಕ..."



"ಕಾಯಿಲೆ ಬಂದಿದ್ರೆ ಊರಿಗೆ ಬರ್ತಿದ್ನೇನ್ರೋ? ಇಲ್ಲಿ ಯಾವ ಡಾಕ್ಟ್ರು ಇದಾರೇಂತ ಸಾಯೋಕೆ ಬರ್ಲಿ? ಅದರಲ್ಲೂ ಸಂಸಾರ ಸಮೇತ..."

"ಹಾಗಂತ ಸರ್ಟಿಫಿಕೇಟ್ ಉಂಟಾ?" ಅಣ್ಣ ಮೊದಲೇ ಈ ಮಾತಿನ ಬಗ್ಗೆ ಹೇಳಿದ್ದ. ಸುಮ್ಮನೆ ಹೆದರಿಸಲು ಹೇಳಿದ್ದಾನೆ ಅಂದುಕೊಂಡಿದ್ದರೆ ಆ ಮಾತು ಸತ್ಯ.

"ಈಗ ನನ್ನ ಏನ್ಮಾಡು ಅಂತೀರಿ? ಅಲ್ಲಿಂದ ಗಂಟುಮೂಟೆ ಕಟ್ಗಂಡು ಬಂದಾಗಿದೆ. ತಿರುಗಿ ಹೋದ್ರೆ ರಸ್ತೇಲಿರ್ಬೇಕು..." ಮಾತಿನ ಕೊನೆಯಲ್ಲಿ ಗಂಟಲು ಗದ್ಗದಿಸಿತೇ? ಅದೋ, ದಾಪುಗಾಲು ಹಾಕುತ್ತಾ ಧಾವಿಸಿ ಬರುತ್ತಿದ್ದಾನೆ ಅಣ್ಣ. ಕೈ ಕೈ ಮುಗಿದು ಕೇಳಿಕೊಳ್ಳುತ್ತಿದ್ದಾನೆ,

"ನಾನೆಲ್ಲಾ ವ್ಯವಸ್ಥೆ ಮಾಡಿದೀನಿ. ಎರಡು ವಾರ ಅವರನ್ನ ಮನೆಯೊಳಗೆ ಸೇರಿಸ್ಕೊಳ್ಳಲ್ಲ. ಸಪರೇಟಾಗೇ ಇರ್ಲಿ. ಆಮೇಲೆ ಏನೂ ಆಗ್ದಿದ್ರೆ ಮನೆಯೊಳಗೆ ಬಿಟ್ಕೊಂಡ್ರಾಯ್ತು..."

"ಅದೇನು ವ್ಯವಸ್ಥೆ ಮಾಡಿದೀಯಪ್ಪಾ, ಕ್ವಾರಂಟೈನ್‌ಗೆ..."

"ಗದ್ದೇಲಿ ಒಂದು ಬಿಡಾರ ರೆಡಿ ಮಾಡಿದೀನಿ. ಪ್ರತ್ಯೇಕವಾಗಿ ಇರ್ತಾರೆ ಅವ್ರು..."

"ನಿನ್ನ ಮಾತು ನಂಬಿಬಿಡ್ತೀವಾ? ಎಷ್ಟಾದ್ರೂ ಅಣ್ಣ, ತಮ್ಮ. ನಿಧಾನಕ್ಕೆ ಹೋಗಿ ಬರೋಕೆ ಶುರು ಮಾಡ್ತಿ. ಊಟ, ತಿಂಡಿ ಸಪ್ಲೈ ಆಗೋದು ಎಲ್ಲಿಂದ?"

"ವ್ಯವಸ್ಥೆ ಮಾಡಿಟ್ಟಿದೀನಿ ಅಂದ್ನಲ್ಲ. ಬೇಕಾದ್ರೆ ನಮ್ಮನೇಗೆ ಕಾವಲು ಹಾಕಿ. ಅವನ ಮುಖ ನೋಡೋಕೆ ಹೋದ್ರೆ ಆಮೇಲೆ ಎಕ್ಕಡ ತಗಂಡು ಹೊಡೀರಿ."